# ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)

CIN: U85110KA1970SGC001919

ಪ್ರಧಾನ ಕಛೇರಿ: ನಂ.82, ಶಕ್ತಿಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001

ಸಹಾಯವಾಣಿ ಸೇವೆಯು (ಕೆಲಸದ ದಿನಗಳಲ್ಲಿ ಮಾತ್ರ) ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 1.00 ವರೆಗೆ ಮತ್ತು 2.00ಗಂಟೆಯಿಂದ ಸಂಜೆ: 5.00 ಗಂಟೆ ವರೆಗೆ ಲಭ್ಯವಿರುತ್ತದೆ.

ದೂರವಾಣಿ : 080–22354372 ಮೊಬೈಲ್ ಸಂಖ್ಯೆ: +91–8105884716 ವೆಬ್‌ಸೈಟ್: www.karnatakapower.com

**ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸತಕ್ಕದ್ದು**

**ಅರ್ಜಿ ಸಲ್ಲಿಸಲು ಆರಂಭ ದಿನಾಂಕ: 19.07.2017**

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18.08.2017 (ಸಂಜೆ 5.00 ಗಂಟೆ ವರೆಗೆ)**

**ಅಕ್ಟೋಬರ್ 2017ರ ತಿಂಗಳಿನಲ್ಲಿ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು**

**ಮೆರಿಟ್ ಆಧಾರದ ಮೇಲೆ ಮಾತ್ರ ಆಯ್ಕೆ ಮಾಡಲಾಗುವುದು. (ಕೆಪಿಸಿಎಲ್ ನಡೆಸುವ ಲಿಖಿತ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಆಧಾರದ ಮೇಲೆ)**

ಸಂಖ್ಯೆ:ಎ1ಪಿ1ಸಿ(ಸಿ1)/ಹೆಚ್‌ಕೆ ದಿನಾಂಕ:03.08.2017

## ಪರಿಷ್ಕೃತ ನೇಮಕಾತಿ ಅಧಿಸೂಚನೆ

**(ಆರ್‌ಟಿಪಿಎಸ್/ಬಿಟಿಪಿಎಸ್/ವೈಟಿಪಿಎಸ್‌ಗೆ ಮಾತ್ರ)**

ಉಲ್ಲೇಖ: ನೇಮಕಾತಿ ಅಧಿಸೂಚನೆ ಸಂಖ್ಯೆ: ಎ1ಪಿ1ಸಿ(ಸಿ1)/ಹೆಚ್‌ಕೆ ದಿನಾಂಕ: 17.07.2017.

-.-.-

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕೆಪಿಸಿಎಲ್) ಕರ್ನಾಟಕ ಸರ್ಕಾರದ ಉದ್ದಿಮೆಯಾಗಿದ್ದು, ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಮತ್ತು ವೃತ್ತಿಪರತೆ ಹಾಗೂ ತಜ್ಞತೆಯಿಂದ ಕಾರ್ಯ ನಿರ್ವಹಿಸುತ್ತಿರುವ ಅಗ್ರಮಾನ್ಯ ಸಂಸ್ಥೆಯಾಗಿದೆ. ಹಾಲಿ ಇರುವ ಸ್ಥಾವರಗಳಿಂದ ಅತ್ಯಧಿಕ ಉತ್ಪಾದನೆ ಮತ್ತು ನೂತನ ಸ್ಥಾವರಗಳ ತ್ವರಿತ ಕಾರ್ಯಾರಂಭ ಮಾಡಲು ಉತ್ತಮ ಶೈಕ್ಷಣಿಕ ವಿದ್ಯಾರ್ಹತೆಯುಳ್ಳ ಮತ್ತು ಸಮರ್ಥ ಸಿಬ್ಬಂದಿಗೆ ಹೆಚ್ಚಿನ ವೃತ್ತಿಪರ ಅವಕಾಶಗಳನ್ನು ಒದಗಿಸುತ್ತಿದೆ.

---

1) ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಉತ್ತಮ ಶೈಕ್ಷಣಿಕ ವಿದ್ಯಾರ್ಹತೆಯುಳ್ಳ ಮತ್ತು ಸಮರ್ಥ ಸಿಬ್ಬಂದಿಗೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ (ಆರ್‌ಟಿಪಿಎಸ್), ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಸ್ಥಾವರ (ಬಿಟಿಪಿಎಸ್) ಮತ್ತು ಯರಮರಸ್ ಶಾಖೋತ್ಪನ್ನ ವಿದ್ಯುತ್ ಸ್ಥಾವರ (ವೈಟಿಪಿಎಸ್) ಗಳಿಗಾಗಿ ಈ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

**ಎಇ(ಸಿವಿಲ್, ಎಲೆಕ್ಟ್ರಿಕಲ್ & ಮೆಕಾನಿಕಲ್) ವೃಂದದಲ್ಲಿ ಹುದ್ದೆಗಳನ್ನು ಹೆಚ್ಚಿಸಿರುವುದರಿಂದಾಗಿ ಈ ಹುದ್ದೆಗಳ ಪರಿಷ್ಕೃತ ಹಂಚಿಕೆ ಕೆಳಕಂಡಂತಿದೆ.**

| ಕ್ರಮ ಸಂಖ್ಯೆ | ಹುದ್ದೆಯ ಸಂಕೇತ | ಹುದ್ದೆ | ಹೈದರಾಬಾದ್–ಕರ್ನಾಟಕ ಹುದ್ದೆಗಳ ಸಂಖ್ಯೆ | | |
|---|---|---|---|---|---|
| | | | ಆರ್‌ಟಿಪಿಎಸ್/ ವೈಟಿಪಿಎಸ್ | ಬಿಟಿಪಿಎಸ್ | ಒಟ್ಟು |
| 1 | BG | ಅಸಿಸ್ಟೆಂಟ್ ಇಂಜಿನಿಯರ್(ಸಿವಿಲ್) | 13 | 09 | 22 |
| 2 | BH | ಅಸಿಸ್ಟೆಂಟ್ ಇಂಜಿನಿಯರ್(ಎಲೆಕ್ಟ್ರಿಕಲ್) | 42 | 29 | 71 |
| 3 | BI | ಅಸಿಸ್ಟೆಂಟ್ ಇಂಜಿನಿಯರ್(ಮೆಕಾನಿಕಲ್) | 18 | 15 | 33 |
| 4 | BJ | ಅಸಿಸ್ಟೆಂಟ್ ಇಂಜಿನಿಯರ್(ಇನ್‌ಸ್ಟ್ರುಮೆಂಟೇಷನ್) | 42 | 18 | 60 |
| 5 | BK | ಜೂನಿಯರ್ ಇಂಜಿನಿಯರ್ (ಸಿವಿಲ್) | 03 | 09 | 12 |
| 6 | BL | ಜೂನಿಯರ್ ಇಂಜಿನಿಯರ್ (ಎಲೆಕ್ಟ್ರಿಕಲ್) | 64 | 33 | 97 |
| 7 | BM | ಜೂನಿಯರ್ ಇಂಜಿನಿಯರ್ (ಮೆಕಾನಿಕಲ್) | 41 | 15 | 56 |
| 8 | BN | ಕೆಮಿಸ್ಟ್ | 02 | 05 | 07 |
| 9 | BO | ಕೆಮಿಕಲ್ ಸೂಪರ್‌ವೈಸರ್ | 20 | 16 | 36 |
| | | ಒಟ್ಟು | **245** | **149** | **394** |

**ಅನುಚ್ಛೇದ 371(ಜೆ) ಅಡಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ ಗುರುತಿಸಲ್ಪಟ್ಟ ಹುದ್ದೆಗಳು (ಸ್ಥಳೀಯ ವೃಂದ):**

| ಕ್ರಮ ಸಂಖ್ಯೆ | ಹುದ್ದೆ ಸಂಕೇತ | ಹುದ್ದೆ ಮತ್ತು ನಿಗದಿಪಡಿಸಿದ ವಿದ್ಯಾರ್ಹತೆ | ಒಟ್ಟು ಹುದ್ದೆಗಳ ಸಂಖ್ಯೆ | ವರ್ಗ | ಹುದ್ದೆಗಳ ಸಂಖ್ಯೆ | ಮೀಸಲಾತಿ ವರ್ಗೀಕರಣ |
|---|---|---|---|---|---|---|
| 1 | **BG** | **ಅಸಿಸ್ಟೆಂಟ್ ಇಂಜಿನಿಯರ್(ಸಿವಿಲ್)**<br>ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಅಥವಾ ಸಮಾನ ವಿದ್ಯಾರ್ಹತೆ.<br>**ಸೂಚನೆ:–** ಸಿವಿಲ್ – ಎನ್ವಿರಾನ್‌ಮೆಂಟ್ ಅಥವಾ ಸಿವಿಲ್ – ಟ್ರಾನ್ಸ್‌ಪೋರ್ಟೇಶನ್ ಪದವಿ ಹೊಂದಿದ ಅಭ್ಯರ್ಥಿಗಳು ಅರ್ಹರಿರುವುದಿಲ್ಲ. | **22** | ಎಸ್‌ಸಿ | 04 | ಮಹಿಳೆ–2, ಗ್ರಾಮೀಣ–1,ಸಾಮಾನ್ಯ–1 |
| | | | | ಎಸ್‌ಟಿ | 01 | ಮಹಿಳೆ–1 |
| | | | | ಪ್ರವರ್ಗ–I | 01 | ಮಹಿಳೆ–1 |
| | | | | ಪ್ರವರ್ಗ–IIಎ | 03 | ಮಹಿಳೆ–1, ಗ್ರಾಮೀಣ–1, ಸಾಮಾನ್ಯ–1 |
| | | | | ಪ್ರವರ್ಗ–IIಬಿ | 01 | ಸಾಮಾನ್ಯ–1 |
| | | | | ಪ್ರವರ್ಗ–IIIಬಿ | 01 | ಮಹಿಳೆ–1 |
| | | | | ಜಿಎಂ | 11 | ಮಹಿಳೆ–5, ಗ್ರಾಮೀಣ–3, ಮಾಜಿ ಸೈನಿಕ–1, ಕನ್ನಡಮಾಧ್ಯಮ–1, ಸಾಮಾನ್ಯ–1 |
| 2 | **BH** | **ಅಸಿಸ್ಟೆಂಟ್ ಇಂಜಿನಿಯರ್ (ಇಲೆಕ್ಟ್ರಿಕಲ್)**<br>ಇಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಅಥವಾ ಸಮಾನ ವಿದ್ಯಾರ್ಹತೆ.<br>**ಸೂಚನೆ:** ಏಳು ಹುದ್ದೆಗಳನ್ನು ಇಲೆಕ್ಟ್ರಾನಿಕ್ಸ್ ಅಥವಾ ಇಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯೂನಿಕೇಶನ್/ ಕಮ್ಯೂನಿಕೇಶನ್ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ. ಏಳು ಹುದ್ದೆಗಳ ಉಪ ವರ್ಗೀಕರಣ ಈ ಕೆಳಕಂಡಂತಿದೆ.<br>ಜಿಎಂ \| 04 \| W-1,R-1,G-2<br>ಎಸ್‌ಸಿ \| 01 \| G-1<br>ಪ್ರವರ್ಗ–II ಎ \| 01 \| G-1<br>ಎಸ್‌ಟಿ/ಪ್ರವರ್ಗ–I/IIಬಿ/IIIಬಿ \| 01 \| G-1 | **71** | ಎಸ್‌ಸಿ | 11 | ಮಹಿಳೆ–4, ಗ್ರಾಮೀಣ–2, ಮಾಜಿ ಸೈನಿಕ–2, ಕನ್ನಡ ಮಾಧ್ಯಮ–1, ಸಾಮಾನ್ಯ–1 ವಿಕಲಚೇತನ–1, **(ನ್ಯೂನ್ಯತೆ: ಒಂದು ಕಾಲು/ ಶ್ರವಣದೋಷ)** |
| | | | | ಎಸ್‌ಟಿ | 02 | ಮಹಿಳೆ–1, ಸಾಮಾನ್ಯ–1, |
| | | | | ಪ್ರವರ್ಗ–I | 03 | ಮಹಿಳೆ–1, ಗ್ರಾಮೀಣ–1,ಸಾಮಾನ್ಯ–1, |
| | | | | ಪ್ರವರ್ಗ–II ಎ | 11 | ಮಹಿಳೆ–5, ಗ್ರಾಮೀಣ–3, ಮಾಜಿ ಸೈನಿಕ–1, ಕನ್ನಡ ಮಾಧ್ಯಮ–1, ಸಾಮಾನ್ಯ–1 |
| | | | | ಪ್ರವರ್ಗ–IIಬಿ | 03 | ಮಹಿಳೆ–1, ಗ್ರಾಮೀಣ–1, ಸಾಮಾನ್ಯ–1, |
| | | | | ಪ್ರವರ್ಗ–IIIಬಿ | 03 | ಮಹಿಳೆ–1, ಗ್ರಾಮೀಣ–1,ಸಾಮಾನ್ಯ–1, |
| | | | | ಜಿಎಂ | 38 | ಮಹಿಳೆ–12, ಗ್ರಾಮೀಣ–10, ಮಾಜಿ ಸೈನಿಕ–4,ಕನ್ನಡ ಮಾಧ್ಯಮ–2, ಸಾಮಾನ್ಯ–9, ವಿಕಲಚೇತನ–1, **(ನ್ಯೂನ್ಯತೆ: ಒಂದು ಕಾಲು/ಶ್ರವಣದೋಷ)** |
| 3 | **BI** | **ಅಸಿಸ್ಟೆಂಟ್ ಇಂಜಿನಿಯರ್ (ಮೆಕಾನಿಕಲ್)**<br>ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಅಥವಾ ಸಮಾನ ವಿದ್ಯಾರ್ಹತೆ.<br>**ಸೂಚನೆ:** ಇಂಡಸ್ಟ್ರಿಯಲ್ ಪ್ರೊಡಕ್ಷನ್ ಅಥವಾ ಆಟೋಮೊಬೈಲ್ ಪದವಿ ಹೊಂದಿರುವ ಅಭ್ಯರ್ಥಿಗಳು ಅರ್ಹರಿರುವುದಿಲ್ಲ. | **33** | ಎಸ್‌ಸಿ | 06 | ಮಹಿಳೆ–2,ಗ್ರಾಮೀಣ–2, ಕನ್ನಡ ಮಾಧ್ಯಮ–1, ಮಾಜಿ ಸೈನಿಕ–1, |
| | | | | ಎಸ್‌ಟಿ | 01 | ಮಹಿಳೆ–1 |
| | | | | ಪ್ರವರ್ಗ–1 | 02 | ಮಹಿಳೆ–1, ಸಾಮಾನ್ಯ–1 |
| | | | | ಪ್ರವರ್ಗ–2ಎ | 02 | ಮಹಿಳೆ–1, ಸಾಮಾನ್ಯ–1 |
| | | | | ಪ್ರವರ್ಗ–2ಬಿ | 01 | ಸಾಮಾನ್ಯ–1 |
| | | | | ಪ್ರವರ್ಗ–3ಎ | 01 | ಸಾಮಾನ್ಯ–1 |
| | | | | ಜಿಎಂ | 20 | ಮಹಿಳೆ–6, ಗ್ರಾಮೀಣ–5, ಮಾಜಿ ಸೈನಿಕ–2, ಕನ್ನಡ ಮಾಧ್ಯಮ–1, ಸಾಮಾನ್ಯ–1 |

<table>
<tr><th>ಕ್ರಮ ಸಂಖ್ಯೆ</th><th>ಹುದ್ದೆ ಸಂಕೇತ</th><th>ಹುದ್ದೆ ಮತ್ತು ನಿಗದಿಪಡಿಸಿದ ವಿದ್ಯಾರ್ಹತೆ</th><th>ಒಟ್ಟು ಹುದ್ದೆಗಳ ಸಂಖ್ಯೆ</th><th>ವರ್ಗ</th><th>ಹುದ್ದೆಗಳ ಸಂಖ್ಯೆ</th><th>ಮೀಸಲಾತಿ ವರ್ಗೀಕರಣ</th></tr>
<tr><td rowspan="8">4</td><td rowspan="8">BJ</td><td rowspan="8">ಅಸಿಸ್ಟೆಂಟ್ ಇಂಜಿನಿಯರ್ (ಇನ್‌ಸ್ಟ್ರುಮೆಂಟೇಷನ್)<br><br>ಇನ್‌ಸ್ಟ್ರುಮೆಂಟೇಷನ್ ಟೆಕ್ನಾಲಜಿ ಇಂಜಿನಿಯರಿಂಗ್‌ನಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಅಥವಾ ಸಮಾನ ವಿದ್ಯಾರ್ಹತೆ.</td><td rowspan="8">60</td><td>ಎಸ್‌ಸಿ</td><td>09</td><td>ಮಹಿಳೆ –3, ಗ್ರಾಮೀಣ–3,<br>ಮಾಜಿ ಸೈನಿಕ–1, ಸಾಮಾನ್ಯ–2</td></tr>
<tr><td>ಎಸ್‌ಟಿ</td><td>02</td><td>ಮಹಿಳೆ–1, ಗ್ರಾಮೀಣ–1</td></tr>
<tr><td>ಪ್ರವರ್ಗ–I</td><td>03</td><td>ಮಹಿಳೆ–1, ಗ್ರಾಮೀಣ–1,ಸಾಮಾನ್ಯ–1</td></tr>
<tr><td>ಪ್ರವರ್ಗ–IIಎ</td><td>09</td><td>ಮಹಿಳೆ–4, ಗ್ರಾಮೀಣ–2,<br>ಮಾಜಿ ಸೈನಿಕ–1, ಸಾಮಾನ್ಯ–2,</td></tr>
<tr><td>ಪ್ರವರ್ಗ–IIಬಿ</td><td>02</td><td>ಮಹಿಳೆ–1, ಸಾಮಾನ್ಯ–1</td></tr>
<tr><td>ಪ್ರವರ್ಗ–IIIಎ</td><td>02</td><td>ಮಹಿಳೆ–1, ಸಾಮಾನ್ಯ–1</td></tr>
<tr><td>ಪ್ರವರ್ಗ–IIIಬಿ</td><td>02</td><td>ಮಹಿಳೆ–1, ಸಾಮಾನ್ಯ–1</td></tr>
<tr><td>ಜಿಎಂ</td><td>31</td><td>ಮಹಿಳೆ–11, ಗ್ರಾಮೀಣ–8,<br>ಮಾಜಿ ಸೈನಿಕ–3,ಕನ್ನಡ ಮಾಧ್ಯಮ–2,<br>ಸಾಮಾನ್ಯ–6, ವಿಕಲಚೇತನ–1,<br>(ನ್ಯೂನ್ಯತೆ: ಒಂದು ಕೈ/ಒಂದು ಕಾಲು/ ಶ್ರವಣದೋಷ)</td></tr>
<tr><td rowspan="6">5</td><td rowspan="6">BK</td><td rowspan="6">ಜೂನಿಯರ್ ಇಂಜಿನಿಯರ್ (ಸಿವಿಲ್)<br><br>ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಮೂರು ವರ್ಷಗಳ ಡಿಪ್ಲೋಮಾ</td><td rowspan="6">12</td><td>ಎಸ್‌ಸಿ</td><td>02</td><td>ಮಹಿಳೆ–1, ಗ್ರಾಮೀಣ–1</td></tr>
<tr><td>ಪ್ರವರ್ಗ–IIಎ</td><td>01</td><td>ಸಾಮಾನ್ಯ–1</td></tr>
<tr><td>ಪ್ರವರ್ಗ–IIಬಿ</td><td>01</td><td>ಸಾಮಾನ್ಯ–1</td></tr>
<tr><td>ಪ್ರವರ್ಗ–IIIಎ</td><td>01</td><td>ಸಾಮಾನ್ಯ–1</td></tr>
<tr><td>ಪ್ರವರ್ಗ–IIIಬಿ</td><td>01</td><td>ಸಾಮಾನ್ಯ–1</td></tr>
<tr><td>ಜಿಎಂ</td><td>06</td><td>ಮಹಿಳೆ–2, ಗ್ರಾಮೀಣ–2,<br>ಮಾಜಿ ಸೈನಿಕ–1, ಸಾಮಾನ್ಯ–1</td></tr>
<tr><td rowspan="7">6</td><td rowspan="7">BL</td><td rowspan="7">ಜೂನಿಯರ್ ಇಂಜಿನಿಯರ್ (ಇಲೆಕ್ಟ್ರಿಕಲ್)<br>ಇಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಮೂರು ವರ್ಷಗಳ ಡಿಪ್ಲೋಮಾ.<br><br><u>ಸೂಚನೆ:</u> ಹತ್ತು ಹುದ್ದೆಗಳನ್ನು ಇಲೆಕ್ಟ್ರಾನಿಕ್ಸ್ ಅಥವಾ ಇಲೆಕ್ಟ್ರಾನಿಕ್ಸ್ & ಟೆಲಿಕಮ್ಯೂನಿಕೇಷನ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ. ಹತ್ತು ಹುದ್ದೆಗಳ ಉಪ ವರ್ಗೀಕರಣ ಈ ಕೆಳಕಂಡಂತಿದೆ.<br><br><table><tr><td>GM</td><td>05</td><td>W-1,R-2,G-2</td></tr><tr><td>SC</td><td>01</td><td>G-1</td></tr><tr><td>ST/Cat-I</td><td>01</td><td>G-1</td></tr><tr><td>Cat-IIa</td><td>02</td><td>W-1,G-1</td></tr><tr><td>IIIa/IIIb</td><td>01</td><td>G-1</td></tr></table></td><td rowspan="7">97</td><td>ಎಸ್‌ಸಿ</td><td>15</td><td>ಮಹಿಳಾ–5, ಗ್ರಾಮೀಣ–4, ಕನ್ನಡ ಮಾಧ್ಯಮ–1, ಮಾಜಿ ಸೈನಿಕ–2, ಸಾಮಾನ್ಯ–2,ವಿಕಲ ಚೇತನ–1<br>ನ್ಯೂನ್ಯತೆ: ಒಂದು ಕಾಲು/ ಶ್ರವಣದೋಷ</td></tr>
<tr><td>ಎಸ್‌ಟಿ</td><td>03</td><td>ಮಹಿಳೆ–1,ಗ್ರಾಮೀಣ–1,ಸಾಮಾನ್ಯ–1</td></tr>
<tr><td>ಪ್ರವರ್ಗ–I</td><td>04</td><td>ಮಹಿಳೆ–1,ಗ್ರಾಮೀಣ–1,ಸಾಮಾನ್ಯ–2</td></tr>
<tr><td>ಪ್ರವರ್ಗ–IIಎ</td><td>16</td><td>ಮಹಿಳೆ –6, ಗ್ರಾಮೀಣ–5,<br>ಕನ್ನಡ ಮಾಧ್ಯಮ–1,ಮಾಜಿ ಸೈನಿಕ–1,<br>ಸಾಮಾನ್ಯ–3</td></tr>
<tr><td>ಪ್ರವರ್ಗ–IIIಎ</td><td>04</td><td>ಮಹಿಳೆ–1, ಗ್ರಾಮೀಣ–1,ಸಾಮಾನ್ಯ–2</td></tr>
<tr><td>ಪ್ರವರ್ಗ–IIIಬಿ</td><td>03</td><td>ಮಹಿಳೆ–1, ಗ್ರಾಮೀಣ–1,ಸಾಮಾನ್ಯ–1</td></tr>
<tr><td>ಜಿಎಂ</td><td>52</td><td>ಮಹಿಳೆ–16, ಗ್ರಾಮೀಣ–13,<br>ಮಾಜಿ ಸೈನಿಕ–6,ಕನ್ನಡ ಮಾಧ್ಯಮ–2,<br>ಸಾಮಾನ್ಯ–13, ವಿಕಲ ಚೇತನ–2<br>(ನ್ಯೂನ್ಯತೆ: ಒಂದು ಕಾಲು–1,<br>ಶ್ರವಣದೋಷ–1)</td></tr>
</table>

| ಕ್ರಮ ಸಂಖ್ಯೆ | ಹುದ್ದೆ ಸಂಕೇತ | ಹುದ್ದೆ ಮತ್ತು ನಿಗದಿಪಡಿಸಿದ ವಿದ್ಯಾರ್ಹತೆ | ಒಟ್ಟು ಹುದ್ದೆಗಳ ಸಂಖ್ಯೆ | ವರ್ಗ | ಹುದ್ದೆಗಳ ಸಂಖ್ಯೆ | ಮೀಸಲಾತಿ ವರ್ಗೀಕರಣ |
|---|---|---|---|---|---|---|
| 7 | **BM** | **ಜೂನಿಯರ್ ಇಂಜಿನಿಯರ್ (ಮೆಕಾನಿಕಲ್)**<br>ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಮೂರು ವರ್ಷಗಳ ಡಿಪ್ಲೋಮಾ<br>**ಸೂಚನೆ–1:–** ಮೂರು ಹುದ್ದೆಗಳನ್ನು ಆಟೋಮೊಬೈಲ್ ಇಂಜಿನಿಯರಿಂಗ್ ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ. ಇವುಗಳಲ್ಲಿ ಒಂದು ಹುದ್ದೆಯನ್ನು ಸಾಮಾನ್ಯ **ವರ್ಗ/ ಪ್ರವರ್ಗ–2**ಎಗೂ ಇನ್ನೊಂದು ಹುದ್ದೆಯನ್ನು ಎಸ್‌ಸಿ/ಎಸ್‌ಟಿ **ಗೆ** ಏಕೀಕೃತ ಗುಂಪಿಗೆ ಲಿಖಿತ ಪರೀಕ್ಷೆಯ ಮೆರಿಟ್ ಆಧಾರದ ಮೇಲೆ ನೀಡಲಾಗುವುದು.<br>**ಸೂಚನೆ–2:–** ಡಿಪ್ಲೋಮಾ ಇನ್ ಮೆಷಿನ್ ಟೂಲ್ಸ್ ಟೆಕ್ನಾಲಜಿ **ಅಥವಾ** ಡಿಪ್ಲೋಮಾ ಇನ್ ಹೀಟ್ ಪವರ್ ಇಂಜಿನಿಯರಿಂಗ್ **ಅಥವಾ** ಡಿಪ್ಲೋಮಾ ಇನ್ ಹಾರೋಲಾಜಿಕಲ್ ಇಂಜಿನಿಯರಿಂಗ್ **ಅಥವಾ** ಡಿಪ್ಲೋಮಾ ಇನ್ ಜಿಟಿಟಿಸಿ ಅಭ್ಯರ್ಥಿಗಳು ಅರ್ಹರಿರುವುದಿಲ್ಲ. | **56** | ಎಸ್‌ಸಿ | **10** | ಮಹಿಳೆ–4, ಗ್ರಾಮೀಣ–3, ಕನ್ನಡ ಮಾಧ್ಯಮ–1, ಮಾಜಿ ಸೈನಿಕ–1, ಸಾಮಾನ್ಯ–1 |
| | | | | ಎಸ್‌ಟಿ | **02** | ಮಹಿಳೆ–1, ಗ್ರಾಮೀಣ–1 |
| | | | | ಪ್ರವರ್ಗ–IIಎ | **10** | ಮಹಿಳೆ–4, ಗ್ರಾಮೀಣ–3, ಮಾಜಿ ಸೈನಿಕ–1,ಕನ್ನಡ ಮಾಧ್ಯಮ–1, ಸಾಮಾನ್ಯ–1 |
| | | | | ಜಿಎಂ | **34** | ಮಹಿಳೆ–11, ಗ್ರಾಮೀಣ–9, ಮಾಜಿ ಸೈನಿಕ–3, ಕನ್ನಡ ಮಾಧ್ಯಮ–2, ಸಾಮಾನ್ಯ–8, ವಿಕಲಚೇತನ–1 **(ನ್ಯೂನ್ಯತೆ: ಶ್ರವಣದೋಷ)** |
| 8 | **BN** | **ಕೆಮಿಸ್ಟ್**<br>ಕೆಮಿಸ್ಟ್ರಿ ಅಥವಾ ಅಪ್ಲೈಡ್ ಕೆಮಿಸ್ಟ್ರಿಯಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಮಾಸ್ಟರ್ಸ್ ಪದವಿ.<br>**ಸೂಚನೆ:–** ಕೆಮಿಸ್ಟ್ರಿಯಲ್ಲಿ ಇನ್ನುಳಿದ ಯಾವುದೇ ವಿಭಾಗದವರನ್ನು ಪರಿಗಣಿಸಲಾಗುವುದಿಲ್ಲ.<br>**ಅಪೇಕ್ಷಣೀಯ;**<br>ಸಂಬಂಧಿಸಿದ ಕ್ಷೇತ್ರದಲ್ಲಿ ಅನುಭವ | **07** | ಎಸ್‌ಸಿ | 02 | ಮಹಿಳೆ–1, ಸಾಮಾನ್ಯ–1 |
| | | | | ಪ್ರವರ್ಗ–IIಎ | 02 | ಮಹಿಳೆ–1, ಸಾಮಾನ್ಯ–1 |
| | | | | ಜಿಎಂ | 03 | ಮಹಿಳೆ–2, ಗ್ರಾಮೀಣ–1, |
| 9 | **BO** | **ಕೆಮಿಕಲ್ ಸೂಪರ್‌ವೈಸರ್**<br>ಅಂಗೀಕೃತ ವಿಶ್ವವಿದ್ಯಾನಿಲಯ ದಿಂದ ರಸಾಯನಶಾಸ್ತ್ರ (ಕೆಮಿಸ್ಟ್ರಿ)ಯೊಂದಿಗೆ **ವಿಜ್ಞಾನ** ಪದವಿ.<br>**ಟಿಪ್ಪಣಿ:** ಅಭ್ಯರ್ಥಿಗಳನ್ನು ಹುದ್ದೆಯ ವೇತನ ಶ್ರೇಣಿಯ **ಕನಿಷ್ಠ** ಮೂಲವೇತನ + ತುಟ್ಟಿ ಭತ್ಯೆಗೆ ಸಮನಾದ ಮಾಸಿಕ ಸಂಭಾವನೆಯ ಮೇಲೆ ಎರಡು **ವರ್ಷ**ಗಳ ಅವಧಿಗೆ ಕೆಮಿಕಲ್ ಸೂಪರ್‌ವೈಸರ್(ಟ್ರೈನಿ) ಎಂದು ನೇಮಿಸಲಾಗುವುದು. ಎರಡು ವರ್ಷಗಳ ತರಬೇತಿಯನ್ನು ತೃಪ್ತಿಕರವಾಗಿ ಮುಗಿಸಿದ ನಂತರ ಅಭ್ಯರ್ಥಿಗಳನ್ನು ಖಾಯಂ ಹುದ್ದೆಗಳಲ್ಲಿ ವಿಲೀನಗೊಳಿಸಲಾಗುವುದು. | **36** | ಎಸ್‌ಸಿ | 05 | ಮಹಿಳೆ–2, ಗ್ರಾಮೀಣ–1, ಸಾಮಾನ್ಯ–2 |
| | | | | ಎಸ್‌ಟಿ | 02 | ಮಹಿಳೆ–1, ಸಾಮಾನ್ಯ–1 |
| | | | | ಪ್ರವರ್ಗ–I | 02 | ಮಹಿಳೆ–1, ಸಾಮಾನ್ಯ–1 |
| | | | | ಪ್ರವರ್ಗ–IIಎ | 04 | ಮಹಿಳೆ–1, ಗ್ರಾಮೀಣ–1, ಸಾಮಾನ್ಯ–2 |
| | | | | ಪ್ರವರ್ಗ–IIಬಿ | 02 | ಮಹಿಳೆ–1, ಸಾಮಾನ್ಯ–1 |
| | | | | ಪ್ರವರ್ಗ–IIIಎ | 01 | ಸಾಮಾನ್ಯ–1 |
| | | | | ಜಿಎಂ | 20 | ಮಹಿಳೆ–7, ಗ್ರಾಮೀಣ–5, ಮಾಜಿ ಸೈನಿಕ–2, ಕನ್ನಡ ಮಾಧ್ಯಮ–1, ಸಾಮಾನ್ಯ–4 ವಿಕಲಚೇತನ–1 **(ನ್ಯೂನ್ಯತೆ: ಒಂದು ಕೈ)** |

## 2) ಅರ್ಜಿ ಸಲ್ಲಿಸುವ ವಿಧಾನ:

ಅಭ್ಯರ್ಥಿಗಳು ನಿಗಮದ ವೆಬ್‌ಸೈಟ್ www.karnatakapower.com ನಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿಯೇ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸತಕ್ಕದ್ದು. ಇತರೆ ಯಾವುದೇ ನಮೂನೆಯಲ್ಲಿ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.

**ಅರ್ಜಿ ಶುಲ್ಕ (ಮರುಪಾವತಿಸದ):**

ಎ) **ರೂ.500/-** (ಎಸ್‌ಸಿ/ಎಸ್‌ಟಿ/ಪ್ರವರ್ಗ-I ಅಭ್ಯರ್ಥಿಗಳಿಗೆ **ರೂ.250/-** +ಅಂಚೆ ಸೇವಾ ಶುಲ್ಕ **ರೂ.15/-**)

ಬಿ) ಅತ್ಯಲ್ಪ ಶುಲ್ಕ (Nominal Fee) ರೂ.50/- (ರೂ.35/- ಪ್ರಕ್ರಿಯೆಯ ಶುಲ್ಕ (Processing Charges) + ರೂ.15/- ಅಂಚೆ ಸೇವಾ ಶುಲ್ಕ) ಈ ಕೆಳಕಂಡ ಅಭ್ಯರ್ಥಿಗಳಿಗೆ

- i) ಮಾಜಿ ಸೈನಿಕ;
- ii) ಯುದ್ದದಲ್ಲಿ ಮಡಿದ ಅಥವಾ ವಿಕಲಚೇತನರಾದ ಯೋಧರ ಮಕ್ಕಳು;
- iii) ವಿಕಲಚೇತನರು(ದಿವ್ಯಾಂಗರು);

**ಪಾವತಿ ಮಾಡುವ ವಿಧಾನ**

- ಅರ್ಜಿ ಶುಲ್ಕವನ್ನು **ಕರ್ನಾಟಕ ರಾಜ್ಯದಲ್ಲಿನ ಗಣಕೀಕೃತ ಹೊಂದಿದ ಯಾವುದೇ ಅಂಚೆ ಕಛೇರಿಯ** ಮೂಲಕ ಪಾವತಿ ಮಾಡಬಹುದು. ಅನ್‌ಲೈನ್ ಅರ್ಜಿಯನ್ನು ನಿಗಮದ ವೆಬ್‌ಸೈಟ್ ಮೂಲಕ ಸಲ್ಲಿಸಿ ಶುಲ್ಕ ಪಾವತಿಗಾಗಿ ಅವಶ್ಯವಿರುವ ಚಲನ್ ಅನ್ನು ಡೌನ್ ಲೋಡ್ ಮಾಡಿ ಅಂಚೆ ಕಛೇರಿಯಲ್ಲಿ ಶುಲ್ಕ ಸಂದಾಯ ಮಾಡುವುದು.
- ಅರ್ಜಿ ಶುಲ್ಕವನ್ನು ಚೆಕ್/ಡಿಡಿ/ಮನಿಆರ್ಡರ್/ಪೋಸ್ಟಲ್‌ಆರ್ಡರ್ ಇತ್ಯಾದಿಗಳ ಮೂಲಕ ಪಾವತಿಸುವುದನ್ನು ಪರಿಗಣಿಸುವುದಿಲ್ಲ.
- ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿಯನ್ನು ಪ್ರತ್ಯೇಕ ಅರ್ಜಿ ಶುಲ್ಕದೊಂದಿಗೆ ಸಲ್ಲಿಸುವುದು.
- ಅಂಚೆ ಸಹಾಯವಾಣಿ-080-22392668.

**ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18.08.2017ರ [ಸಂಜೆ 5.00 ಘಂಟೆ ವರೆಗೆ]**
**ಅಂಚೆ ಕಛೇರಿಯಲ್ಲಿ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ:22.08.2017 [ಮಧ್ಯಾಹ್ನ 3.00ಗಂಟೆ ವರೆಗೆ]**

## 3) ವಯೋಮಿತಿ:

ಅಭ್ಯರ್ಥಿಗಳು ಕನಿಷ್ಠ 18 ವರ್ಷ ವಯೋಮಿತಿಯನ್ನು ಹೊಂದಿರಬೇಕು. ಗರಿಷ್ಠ ವಯೋಮಿತಿಯು ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ವರ್ಗ | ವಯೋಮಿತಿ |
|---|---|---|
| 1 | ಎಸ್‌ಸಿ/ಎಸ್‌ಟಿ/ಪ್ರವರ್ಗ-1 | 40 ವರ್ಷಗಳು |
| 2 | ಇತರ ಹಿಂದುಳಿದ ವರ್ಗಗಳು | 38 ವರ್ಷಗಳು |
| 3 | ಸಾಮಾನ್ಯ ವರ್ಗ | 35 ವರ್ಷಗಳು |
| 4 | ಮಾಜಿ ಸೈನಿಕ | 45 ವರ್ಷಗಳು* |

* ಮಾಜಿ ಸೈನಿಕರಿಗೆ ಅವರುಗಳು ಸೇನಾಪಡೆಯಲ್ಲಿ ಸೇವೆ ಸಲ್ಲಿಸಿದ ಅವಧಿಗೆ ಸಮಾನವಾಗಿ ವಯೋಮಿತಿಯನ್ನು ಸಡಿಲಿಸಲಾಗುವುದು, ಆದರೆ ಅವರ ವಯೋಮಿತಿಯು 45 ವರ್ಷ ಮೀರಿರಬಾರದು.

- ವಿಕಲಚೇತನರು ಮತ್ತು ವಿಧವೆಯರಿಗೆ ಸಂಬಂಧಿಸಿದ ವರ್ಗದಲ್ಲಿ 10 ವರ್ಷಗಳ ವರೆಗೆ ವಯೋಮಿತಿ ಸಡಿಲಿಕೆ ಇರುತ್ತದೆ.
- ಅರ್ಜಿದಾರರ ವಯಸ್ಸನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಇರುವಂತೆ ಲೆಕ್ಕಹಾಕಲಾಗುವುದು.

## 4) ವೇತನ ಶ್ರೇಣಿಗಳು ಮತ್ತು ಭತ್ಯೆಗಳು:

### I. ವೇತನ ಶ್ರೇಣಿ:

| | |
|---|---|
| **ಅಸಿಸ್ಟೆಂಟ್ ಇಂಜಿನಿಯರ್** | ರೂ.19055–540–19595–650–22845–750–26595–860–31755–970–37575–1070–43995 |
| **ಜೂನಿಯರ್ ಇಂಜಿನಿಯರ್** | ರೂ.14395–490–16355–540–19595–650–22845–750–26595–860–31755–970–37575–1070–40785 |
| **ಕೆಮಿಸ್ಟ್** | ರೂ.16355–540–19595–650–22845–750–26595–860–31755–970–37575–1070–41855 |
| **ಕೆಮಿಕಲ್ ಸೂಪರ್‌ವೈಸರ್** | ರೂ.14395–490–16355–540–19595–650–22845–750–26595–860–31755–970–37575–1070–40785 |

**II. ಸೌಲಭ್ಯಗಳು:** ನಿಗಮದ ನಿಯಮಾನುಸಾರ ತೈನಾತಿಯ ಸ್ಥಳಕ್ಕೆ ಅನ್ವಯವಾಗುವ ಸೌಲಭ್ಯಗಳನ್ನು ನೀಡಲಾಗುವುದು. ಪ್ರಸಕ್ತ ವೇತನ ಶ್ರೇಣಿಯ ಕನಿಷ್ಠ ಹಂತದಲ್ಲಿ ಅಂದಾಜು ವೇತನ ಮೊತ್ತವು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಹುದ್ದೆ | ವೇತನ |
|---|---|---|
| **1** | **ಅಸಿಸ್ಟೆಂಟ್ ಇಂಜಿನಿಯರ್** | **ರೂ.49,959/–** |
| **2** | **ಕೆಮಿಸ್ಟ್** | **ರೂ.43,257/–** |
| **3** | **ಜೂನಿಯರ್ ಇಂಜಿನಿಯರ್** | **ರೂ.37,938/–** |
| **4** | **ಕೆಮಿಕಲ್ ಸೂಪರ್‌ವೈಸರ್ (ಖಾಯಂ ಹುದ್ದೆಗಳಲ್ಲಿ ವಿಲೀನಗೊಳಿಸಿದ ನಂತರ ಅನ್ವಯವಾಗುವ ವೇತನ)** | **ರೂ.37,938/–** |

**III. ಪಿಂಚಣಿ:** ದಿನಾಂಕ **01.01.2012** ರಿಂದ ಅನ್ವಯವಾಗುವಂತೆ **"ನ್ಯೂ ಡಿಫೈನ್ಡ್ ಕಾಂಟ್ರಿಬ್ಯೂಟರಿ ಪೆನ್ಷನ್ ಸ್ಕೀಂ"** ಅನ್ವಯ.

## 5) ಖಾಯಂ ಪೂರ್ವ ಅವಧಿ/ಕನಿಷ್ಠ ಸೇವೆ/ನಿಯುಕ್ತಿ:

- ಆಯ್ಕೆಯಾದ ಅಭ್ಯರ್ಥಿಗಳನ್ನು ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿರುವ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಿಗೆ ನಿಯೋಜಿಸಲಾಗುವುದು. ಅಭ್ಯರ್ಥಿಗಳು 12 ತಿಂಗಳುಗಳ ವರೆಗೆ ಖಾಯಂ ಪೂರ್ವ(Probation) ಅವಧಿಯಲ್ಲಿರುತ್ತಾರೆ.
- ಆಯ್ಕೆಯಾದ ಅಭ್ಯರ್ಥಿಗಳು ನಿಗಮದಲ್ಲಿ ಸೇವೆಗೆ ಸೇರಿದ ದಿನಾಂಕದಿಂದ ಕನಿಷ್ಠ 5 ವರ್ಷಗಳ ಸೇವೆಯನ್ನು ಅವಿರತವಾಗಿ [Continuously] ಸಲ್ಲಿಸುವುದಾಗಿ ರೂ.200/–(ಎರಡು ನೂರು ಮಾತ್ರ)ರ ಛಾಪಾ ಕಾಗದ [Non Judicial] ದಲ್ಲಿ ಒಪ್ಪಂದ ಮಾಡಿಕೊಳ್ಳಬೇಕು.
- ಆಯ್ಕೆಯಾದ ಅಭ್ಯರ್ಥಿಗಳು ಯೋಜನಾ ಪ್ರದೇಶದಲ್ಲಿ ಕನಿಷ್ಠ **ಹತ್ತು ವರ್ಷಗಳ** ಸೇವೆಯನ್ನು ಸಲ್ಲಿಸುವುದಾಗಿ ಮುಚ್ಚಳಿಕೆಯನ್ನು ಕೊಡಬೇಕಾಗುತ್ತದೆ.
- ಕಿರಿಯ ಅಭಿಯಂತರರು ಮತ್ತು ಕೆಮಿಕಲ್ ಸೂಪರ್‌ವೈಸರ್ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಗಳು ನಿಗದಿಗೊಳಿಸಿದ ವಿದ್ಯಾರ್ಹತೆಗಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿದ್ದಲ್ಲಿ ಹುದ್ದೆಯ ಉನ್ನತೀಕರಣ ಯೋಜನೆಯಡಿ ಹುದ್ದೆಯ ಉನ್ನತೀಕರಣಕ್ಕೆ ಅವರ ಕೋರಿಕೆಯನ್ನು **5 ವರ್ಷ ಸೇವೆ** ಪೂರ್ಣಗೊಳಿಸುವವರೆಗೆ ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ ಪರಿಗಣಿಸಲಾಗುವುದಿಲ್ಲ.

## 6) ಆಯ್ಕೆ ವಿಧಾನ:

ಅಭ್ಯರ್ಥಿಗಳನ್ನು ಮೆರಿಟ್ ಅಧಾರದ ಮೇಲೆ ಮಾತ್ರ ಮತ್ತು ಮೀಸಲಾತಿ ನಿಯಮಗಳನ್ನು ಪಾಲಿಸಿ ಆಯ್ಕೆ ಮಾಡಲಾಗುವುದು.

ಲಿಖಿತ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಆಧಾರದ ಮೇಲೆ ಜೇಷ್ಠತಾ(ಮೆರಿಟ್) ಪಟ್ಟಿಯನ್ನು ತಯಾರಿಸಲಾಗುವುದು.

## 7) ಲಿಖಿತ ಪರೀಕ್ಷೆ:

ಲಿಖಿತ ಪರೀಕ್ಷೆಯನ್ನು 100 ಅಂಕಗಳಿಗೆ ಸಂಬಂಧಿಸಿದ ತಾಂತ್ರಿಕ ವಿಷಯಗಳಲ್ಲಿ ನಡೆಸಲಾಗುವುದು. ಪ್ರಶ್ನೆಗಳು ಆಬ್ಜೆಕ್ಟೀವ್ (Objective) ಮಾದರಿಯಾಗಿದ್ದು ಬಹು ಆಯ್ಕೆಯ ಉತ್ತರಗಳಿರುತ್ತವೆ. ಅಭ್ಯರ್ಥಿಗಳು ಓಎಮ್‌ಆರ್ (OMR) ಹಾಳೆಯಲ್ಲಿ ಉತ್ತರವನ್ನು ಗುರುತು ಮಾಡಬೇಕಾಗುತ್ತದೆ.

ಇಂಜಿನಿಯರಿಂಗ್ ಹುದ್ದೆಗಳ ಪ್ರಶ್ನೆ ಪತ್ರಿಕೆಗಳು ಆಂಗ್ಲ ಆವೃತ್ತಿಯಲ್ಲಿ ಮಾತ್ರ ಹಾಗೂ ಕೆಮಿಸ್ಟ್/ಕೆಮಿಕಲ್ ಸೂಪರ್‌ವೈಸರ್ಸ್ ಹುದ್ದೆಗಳ ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಎರಡೂ ಆವೃತ್ತಿಗಳಲ್ಲಿರುತ್ತವೆ.

- ಲಿಖಿತ ಪರೀಕ್ಷೆಯನ್ನು ಈ ಕೆಳಕಂಡ 6 ಕೇಂದ್ರಗಳಲ್ಲಿ ನಡೆಸಲಾಗುವುದು. ಅಭ್ಯರ್ಥಿಗಳು ಯಾವುದಾದರೊಂದು ಕೇಂದ್ರದಲ್ಲಿ ಮಾತ್ರ ಲಿಖಿತ ಪರೀಕ್ಷೆಗೆ ಹಾಜರಾಗತಕ್ಕದ್ದು.

  1. **ಬೆಂಗಳೂರು**
  2. **ಬಳ್ಳಾರಿ**
  3. **ಬೆಳಗಾಂ**
  4. **ಕಲಬುರ್ಗಿ**
  5. **ಮೈಸೂರು**
  6. **ಶಿವಮೊಗ್ಗ**

- ಅಭ್ಯರ್ಥಿಗಳು ಲಿಖಿತ ಪರೀಕ್ಷೆಗಾಗಿ ಯಾವುದಾದರು **ಎರಡು ಪರೀಕ್ಷಾ ಕೇಂದ್ರಗಳನ್ನು** ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಆಯ್ಕೆಯ ಕೇಂದ್ರಗಳಲ್ಲಿ ಸ್ಥಳಾವಕಾಶವಾಗದಿದ್ದಲ್ಲಿ ಅವರಿಗೆ ಆಯ್ಕೆಯ ಕೇಂದ್ರಗಳ ಹತ್ತಿರವಿರುವ ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆಗೆ ಅವಕಾಶ ನೀಡಲಾಗುವುದು.
- ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಒಂದೇ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳುವುದು.

## 8) ಕನ್ನಡ ಭಾಷಾ ಪರೀಕ್ಷೆ:

- ಎಸ್ಎಸ್ಎಲ್ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಅಭ್ಯಾಸ ಮಾಡದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಬೇಕಾಗುತ್ತದೆ.
- ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗುವುದು.
- ಕನ್ನಡ ಭಾಷಾ ಪರೀಕ್ಷೆಯ ದಿನಾಂಕ ಮತ್ತು ಸ್ಥಳವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

## 9) ದಾಖಲೆಗಳ ಪರಿಶೀಲನೆ:

ಎ) ಮೆರಿಟ್ ಆಧಾರದ ಮೇಲೆ ದಾಖಲೆಗಳ ಪರಿಶೀಲನೆಗಾಗಿ ಕರೆದಾಗ ಅಭ್ಯರ್ಥಿಗಳು ಈ ಕೆಳಕಂಡ ಮೂಲ ದಾಖಲೆಗಳ ಜೊತೆಗೆ ಸ್ವ-ದೃಢೀಕೃತ (Self-attested) ಎರಡು ಜೆರಾಕ್ಸ್ ಪ್ರತಿಗಳೊಂದಿಗೆ ಹಾಜರಾಗತಕ್ಕದ್ದು,

ವಯಸ್ಸು, ವಿದ್ಯಾರ್ಹತೆ ಮತ್ತು ಮೀಸಲಾತಿ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ಮೂಲ ದಾಖಲೆಗಳನ್ನು ಹಾಜರುಪಡಿಸುವುದು

i. ಜನ್ಮ ದಿನಾಂಕಕ್ಕೆ ಆಧಾರವಾಗಿ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ
ii. ಪದವಿ/ಡಿಪ್ಲೋಮಾ ಪ್ರಮಾಣ ಪತ್ರ (Degree/Diploma Certificates)
iii. ಎಲ್ಲಾ ಪರೀಕ್ಷೆಗಳ(ಪ್ರತಿ ವರ್ಷ/ಪ್ರತಿ ಸೆಮಿಸ್ಟರ್‌ಗಳ)ಅಂಕಪಟ್ಟಿಗಳು.
iv. ಅಂಚೆ ಕಛೇರಿಯ ಅಧಿಕಾರಿಗಳಿಂದ ಸಹಿ ಮಾಡಿದ ಚಲನ್ ಮತ್ತು ಹಣಪಾವತಿಸಿದ ರಶೀದಿ.
v. ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಿದಾಗ ಪಡೆದ ಸ್ವೀಕೃತಿ ಪತ್ರ [Acknowledgement].
vi. ಅಭ್ಯರ್ಥಿ ಪ್ರವೇಶ ಪತ್ರ [Hall ticket] ದಲ್ಲಿ ಪರೀಕ್ಷಾ ಮೇಲ್ವಿಚಾರಕರು ಸಹಿಮಾಡಿದ ಪ್ರತಿ.
vii. ಅಭ್ಯರ್ಥಿಯ ಕೋರಿಕೆಗೆ ಸಂಬಂಧಿಸಿದ ಇತರೆ ಪ್ರಮಾಣ ಪತ್ರಗಳು.
viii. ಅಭ್ಯರ್ಥಿಯು ಯಾವುದೇ ಸಂಸ್ಥೆಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂತಹವರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರ. [No Objection Certificate].

ಬಿ) ಜಾತಿ/ವರ್ಗ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಈ ಕೆಳಕಂಡ ನಮೂನೆಯಲ್ಲಿ ಪ್ರಮಾಣ ಪತ್ರಗಳನ್ನು ಕರ್ನಾಟಕ ಸರ್ಕಾರದ ಆದೇಶ/ನಿರ್ದೇಶನಗಳ ಪ್ರಕಾರ ಸಲ್ಲಿಸುವುದು, ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕಕ್ಕೆ ಮುಂಚಿತವಾಗಿ ಮಾನ್ಯವಾದ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು:

| | | | |
|---|---|---|---|
| i) | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ | : | ನಮೂನೆ-ಡಿ |
| | ಪ್ರವರ್ಗ-I | : | ನಮೂನೆ-ಇ |
| | ಪ್ರವರ್ಗ- IIA, IIB, IIIA, IIIB | : | ನಮೂನೆ-ಎಫ್ |
| ii) | ಗ್ರಾಮೀಣ ಪ್ರಮಾಣ ಪತ್ರ | : | ಸರ್ಕಾರಿ ಆದೇಶ ಸಂ: ಸಿಆಸುಇ 08 ಸೆನೆನಿ 2001 ದಿನಾಂಕ 13.2.2001 ಮತ್ತು ಸಿಆಸುಇ 96 ಸೆನೆನಿ 2005 ಬೆಂಗಳೂರು ದಿನಾಂಕ:10.8.2005ರಲ್ಲಿ ನಿಗದಿ |

| | | | |
|---|---|---|---|
| | | | ಪಡಿಸಿರುವ (ನಮೂನೆ–1 ಮತ್ತು 2 ಲಗತ್ತಿಸಿದೆ.) |
| iii) | ಕನ್ನಡ ಮಾಧ್ಯಮ ಪ್ರಮಾಣ ಪತ್ರ | : | ಸರ್ಕಾರಿ ಅಧಿಸೂಚನೆ ಸಂ: ಸಿಆಸುಇ 71 ಜಿಪಿಆರ್ 2001 ದಿನಾಂಕ 24.10.2002. |
| iv) | ವಿಕಲಚೇತನ | : | ಕಛೇರಿ ಜ್ಞಾಪನಾ ಪತ್ರ ಸಂಖ್ಯೆ: ಸಿಆಸುಇ 115 ಎಸ್ಆರ್ಆರ್ 2005 ಬೆಂಗಳೂರು ದಿನಾಂಕ: 19.11.2005. |
| v) | ಮಾಜಿ ಸೈನಿಕ | : | ಕರ್ತವ್ಯ ಬಿಡುಗಡೆ ಪತ್ರ(Discharge Certificate) |
| vi) | ಹೈದರಾಬಾದ್–ಕರ್ನಾಟಕ ಪ್ರದೇಶದ ಅಭ್ಯರ್ಥಿ (Under Article 371(J) ) | : | ಸಿಆಸುಇ 43 ಹೆಚ್‌ಕೆಸಿ 2013 ದಿನಾಂಕ:29.1.2014 ಮತ್ತು ಸಿಆಸುಇ 78 ಹೆಚ್‌ಕೆಸಿ 2014 ದಿನಾಂಕ: 09.09.2015. |
| vii) | **ಅರ್ಜಿ ಶುಲ್ಕ ಪಾವತಿಯಲ್ಲಿ ವಿನಾಯಿತಿ:** ಮಾಜಿ ಸೈನಿಕ/ವಿಕಲಚೇತನ/ಸೇವಾ ಅವಧಿಯಲ್ಲಿ ಮರಣ ಅಥವಾ ವಿಕಲಚೇತನರಾದ ಸೈನಿಕರ ಮಕ್ಕಳು | : | ಸರ್ಕಾರಿ ಅಧಿಸೂಚನೆ ಸಂಖ್ಯೆ:ಸಿಆಸುಇ 142 ಎಸ್ಆರ್ಆರ್ 2006 ದಿನಾಂಕ: 5.11.2007. |

ಈ ಮೇಲಿನ ದಾಖಲೆಗಳನ್ನು ಹಾಜರು ಪಡಿಸದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

**10) ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ/ಕನ್ನಡ ಭಾಷಾ ಪರೀಕ್ಷೆ/ದಾಖಲೆಗಳ ಪರಿಶೀಲನೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆ (TA/DA) ನೀಡಲಾಗುವುದಿಲ್ಲ.**

**11) ಸಾಮಾನ್ಯ ಸೂಚನೆಗಳು:**

ಅ) ಅರ್ಜಿದಾರರು ಭಾರತೀಯ ನಾಗರೀಕರಾಗಿರಬೇಕು.

ಆ) ಅರ್ಜಿ ಸಲ್ಲಿಸಲು ನಿಗಮವು ನಿಗದಿಪಡಿಸಿದ ಕೊನೆಯ ದಿನಾಂಕದಂದು ಫಲಿತಾಂಶ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಇ) ಅಭ್ಯರ್ಥಿಯು ಯಾವುದೇ ತಪ್ಪು ಮಾಹಿತಿಯನ್ನು ನೀಡಿರುವುದು ಕಂಡು ಬಂದಲ್ಲಿ ಅದಕ್ಕೆ ಅವನು/ಆಕೆಯನ್ನು ನೇಮಕಾತಿಯ ಮುಂದಿನ ಹಂತಕ್ಕೆ ಅನರ್ಹಗೊಳಿಸುವುದಲ್ಲದೆ ಸೂಕ್ತ ಕಾನೂನು ಕ್ರಮವನ್ನು ಜರುಗಿಸಲಾಗುವುದು.

ಈ) ಅಧಿಸೂಚನೆಯಲ್ಲಿ ಪ್ರಕಟಿಸಿರುವ ಹುದ್ದೆಗಳ ಸಂಖ್ಯೆಗಳು ತಾತ್ಕಾಲಿಕವಿದ್ದು (provisional)ಅವನ್ನು ಅವಶ್ಯಕತೆಗನುಸಾರ ಹೆಚ್ಚು/ಕಡಿಮೆ ಮಾಡಬಹುದಾಗಿದೆ. ನಿಗಮವು ಈ ನೇಮಕಾತಿಯನ್ನು ಭಾಗಶ:/ಪೂರ್ಣವಾಗಿ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ರದ್ದುಪಡಿಸುವ ಅಧಿಕಾರವನ್ನು ಹೊಂದಿದೆ.

ಉ) ಅಭ್ಯರ್ಥಿಗಳು ಯಾವುದೇ ಸಂಸ್ಥೆಯಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ದಾಖಲಾತಿಗಳ ಪರಿಶೀಲನೆ ವೇಳೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರ [NOC] ಸಲ್ಲಿಸುವುದು. ತಪ್ಪಿದಲ್ಲಿ ಅವರನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಊ) ಅಭ್ಯರ್ಥಿಗಳು **ಆನ್–ಲೈನ್** ಮುಖಾಂತರ ಅರ್ಜಿಯನ್ನು ಸಲ್ಲಿಸುವಾಗ ಗಮನಿಸಬೇಕಾಗಿರುವುದೇನೆಂದರೆ ಸಾಮಾನ್ಯವಾಗಿ ಅರ್ಜಿ ಸಲ್ಲಿಸುವ ಕಡೆಯ ದಿನದಂದು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸುವಿಕೆಯ ಸಾಧ್ಯತೆ ಇರುವುದರಿಂದ ಅಂತರ್ ಜಾಲದಲ್ಲಿ (Internet) ಅರ್ಜಿ ಸಲ್ಲಿಸುವಿಕೆಯ ಕ್ಷಮತೆಯು ಗಣನೀಯವಾಗಿ ತಗ್ಗುವುದು. ಇದರಿಂದ ಅರ್ಜಿ ಸಲ್ಲಿಸುವಿಕೆ ಪ್ರಕ್ರಿಯೆ ಕಷ್ಟಕರವಾಗುವುದು. ಆದ್ದರಿಂದ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಸಲ್ಲಿಸಲು ಕಡೆಯ ದಿನದವರೆಗೆ ಕಾಯದೇ ಮುಂಚಿತವಾಗಿಯೇ ಸಲ್ಲಿಸುವುದು ಸೂಕ್ತವಾಗಿರುತ್ತದೆ. ನಿಗದಿತ ಸಮಯದಲ್ಲಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಲಾಗದಿದ್ದಲ್ಲಿ ಹಾಗೂ ಯಾವುದೇ ವೈಫಲ್ಯಕ್ಕೆ ನಿಗಮವು ಜವಾಬ್ದಾರಿಯಲ್ಲ.

ಎ) ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ. ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ ಎಲ್ಲ ವಿವರಗಳನ್ನು ಆಗಿಂದಾಗ್ಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಏ) ಅಂಚೆ/**ಖುದ್ದಾಗಿ**/ಕೊರಿಯರ್ **ಅಥವಾ ಇನ್ನಾವುದೇ ಪ್ರಕಾರದಲ್ಲಿ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.**

**ನಿರ್ದೇಶಕರು(ಮಾ.ಸಂ)**

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸೇ ನೆ ನಿ 2001, ಬೆಂಗಳೂರು ದಿನಾಂಕ: 13.02.2001**

**ನಮೂನೆ – 1**

ಜನರಲ್ ಮೆರಿಟ್ ಅಭ್ಯರ್ಥಿಗಳು ಮೇಲುಸ್ಥರಕ್ಕೆ ಸೇರಿಲ್ಲವೆಂದು, ದೃಢೀಕರಿಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣ ಪತ್ರ

(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿ ಮಾಡಬೇಕಾದ ನಮೂನೆ)

ಗೆ,

ತಹಶೀಲ್ದಾರ್,

. . . . . . . . . . . ತಾಲ್ಲೂಕು

. . . . . .  . . . . .ಜಿಲ್ಲೆ

ಮಾನ್ಯರೆ,

ಶ್ರೀ/ಶ್ರೀಮತಿ . . . . . . . . . . . . . . . . . . . . . . . . . . ಎಂಬುವವರ ಮಗ/ಮಗಳು/ ಹೆಂಡತಿ/ಗಂಡ . . . . . . . . . . . . . . . . . . . . ಆದ ನಾನು ಮೇಲುಸ್ಥರದಲ್ಲಿ (Creamy Layer) ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

| | | |
|---|---|---|
| 1 | ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ | |
| 2 | ಅಭ್ಯರ್ಥಿಯ ಸ್ವಂತ ಸ್ಥಳ | ಗ್ರಾಮ: |
| | | ತಾಲ್ಲೂಕು: |
| | | ಜಿಲ್ಲೆ |
| 3 | ಅಭ್ಯರ್ಥಿಯ ಹುಟ್ಟಿದ ದಿನಾಂಕ, ವಯಸ್ಸು, ಮತ್ತು ಹುಟ್ಟಿದ ಸ್ಥಳ | |
| 4 | ಅಭ್ಯರ್ಥಿಯ ತಂದೆ/ತಾಯಿ/ಪೋಷಕರ/ಹೆಂಡತಿ/ ಗಂಡನ ಹೆಸರು ಮತ್ತು ಉದ್ಯೋಗ<br>(ಉದ್ಯೋಗವು ಸರ್ಕಾರಿ/ಅರೆಸರ್ಕಾರಿ/ಸಾರ್ವಜನಿಕ ಉದ್ದಿಮೆ/ಖಾಸಗಿ) | |
| 5 | ಅಭ್ಯರ್ಥಿಯ ಪ್ರಸ್ತುತ ಅಂಚೆ ವಿಳಾಸ<br>(ಸ್ಪಷ್ಟವಾಗಿ ನಮೂದಿಸುವುದು) | |
| 6 | ಅಭ್ಯರ್ಥಿಯ ಖಾಯಂ ಅಂಚೆ ವಿಳಾಸ | |
| 7 | ಅಭ್ಯರ್ಥಿಯ ಪ್ರಾಥಮಿಕ/ಮಾಧ್ಯಮಿಕ ಹಾಗೂ ಪ್ರೌಢಶಾಲಾ ಶಿಕ್ಷಣದ ವ್ಯಾಸಂಗ ಮಾಡಿದ ಶಾಲೆಗಳ ವಿವರಗಳು. | |
| 8 | ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ/ತಾಯಿ/ ಪೋಷಕರ (ತಂದೆ/ತಾಯಿ ಜೀವಂತವಾಗಿರದಿದ್ದಲ್ಲಿ) ಹೆಂಡತಿ/ಗಂಡ ಇವರ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ<br>1. ವೇತನ (ವೇತನ ಶ್ರೇಣಿ)<br>2. ಜಮೀನಿನ ವಿವರಗಳು<br>3. ಇತರೇ ಮೂಲಗಳಿಂದ | |
| 9 | ಆದಾಯ ತೆರಿಗೆ ಪಾವತಿದಾರರೇ ? | |
| 10 | ಸಂಪತ್ತು ತೆರಿಗೆ ಪಾವತಿದಾರರೇ ? | |
| 11 | ಮಾರಾಟ ತೆರಿಗೆ ಪಾವತಿದಾರರೇ ? | |

**ಪ್ರಮಾಣೀಕೃತ ಘೋಷಣೆ**

ಈ ಮೇಲೆ ನನ್ನಿಂದ ಒದಗಿಸಲಾದ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಪ್ರಮಾಣೀಕರಿಸಿ ಘೋಷಿಸುತ್ತೇನೆ.

ಸ್ಥಳ : ತಮ್ಮ ವಿಧೇಯ
ದಿನಾಂಕ : (ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತಾ, ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟದಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ/ತಾಯಿ/ಪೋಷಕರು
(ತಂದೆ/ತಾಯಿ ಜೀವಂತವಾಗಿರದಿದ್ದಲ್ಲಿ)
(ಹೆಂಡತಿ/ಗಂಡ ಇವರ ಸಹಿ)

**ಇಬ್ಬರು ಸ್ಥಳೀಯ ಸಾಕ್ಷಿಗಳು**

ಅಭ್ಯರ್ಥಿಯ ಮತ್ತು ತಂದೆ/ತಾಯಿ/ಪೋಷಕರು/ಗಂಡ/ಹೆಂಡತಿ ಇವರನ್ನು ಹಾಗೂ ಇವರ ಸಹಿಯನ್ನು ನಾವು ಗುರುತಿಸುತ್ತೇವೆ.

ಸಾಕ್ಷಿಗಳ ಸಹಿ **1.**
(ಪೂರ್ಣ ವಿಳಾಸದೊಂದಿಗೆ) **2.**

---

**ಪರಿಶೀಲನಾ ಪ್ರಮಾಣ ಪತ್ರ**

1. ಶ್ರೀ/ಶ್ರೀಮತಿ. . . . . . . . . . . . . . . . . . . . . . ಇವರ ಮಗ/ಮಗಳು/ ಹೆಂಡತಿ/ಗಂಡ/ಶ್ರೀ/ಶ್ರೀಮತಿ/ಕುಮಾರಿ . . . . . . . . . . . . . . . . ಎಂಬುವವರು ಕರ್ನಾಟಕ ರಾಜ್ಯದ . . . . . . . . . . . . . . . ಜಿಲ್ಲೆಯ ವಿಭಾಗ . . . . . . . . . . . . . . ಗ್ರಾಮ/ಪಟ್ಟಣ/ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆಂದು ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.
2. ಶ್ರೀ/ಶ್ರೀಮತಿ/ಕುಮಾರಿ . . . . . . . . . . . . . . . . . . . ಇವರ ತಂದೆ/ತಾಯಿ/ಪೋಷಕರು ಇವರು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂ 251 ಬಿಸಿಎ 94, ಬೆಂಗಳೂರು ದಿನಾಂಕ: 31.01.1995 ರನ್ವಯ ಜನರಲ್ ಮೆರಿಟ್ ವರ್ಗದ ಮೇಲುಸ್ಥರದಲ್ಲಿ (Creamy layer) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ: **ತಹಶೀಲ್ದಾರ್**
ದಿನಾಂಕ: . . . . . . . . . . . **ತಾಲ್ಲೂಕು**

**ಸೂಚನೆ:–1**

ಇದರಲ್ಲಿ ಉಪಯೋಗಿಸಲಾಗಿರುವ "ಸಾಮಾನ್ಯ ನಿವಾಸಿ" ಎಂಬ ಪದವಿ 1950ರ ಜನತಾ ಪ್ರಾತಿನಿಧ್ಯ ಕಾಯಿದೆಯ 20ನೇ ಅನುಚ್ಛೇದದಲ್ಲಿನ ಅರ್ಥವನ್ನು ಹೊಂದಿರುತ್ತದೆ.

**ಸೂಚನೆ:–2**

ಪರಿಶೀಲನಾ ಪ್ರಮಾಣ ಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 251 ಬಿಸಿಎ 95, ಬೆಂಗಳೂರು ದಿನಾಂಕ:31.01.1995ರನ್ವಯ ಮೇಲುಸ್ಥರ (Creamy layer) ದರವನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪ್ರಮಾಣ ಪತ್ರ ನೀಡತಕ್ಕುದ್ದು.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಸೇ ನಿ ನಿ 2005 ದಿನಾಂಕ: 10.08.2005**

## ನಮೂನೆ –2
## ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ಶ್ರೀಮತಿ . . . . . . . . . . . . . . . . . . . . . . . . . ರವರ ಮಗ/ಮಗಳು/ಪತಿ/ಪತ್ನಿ ಶ್ರೀ/ಶ್ರೀಮತಿ/ಕುಮಾರಿ . . . . . . . . . . . . . . . . . . . , . . . . . . . . . . . . . . . ಜಿಲ್ಲೆ . . . . . . . . . . . . . . . . . . . . ತಾಲ್ಲೂಕು . . . . . . . . . . . . . . . . . . . . . . . . . ಗ್ರಾಮದಲ್ಲಿ ವಾಸವಾಗಿರುವ ಇವರು . . . . . ತರಗತಿಯಿಂದ . . . . . . ತರಗತಿಯವರೆಗೆ . . . . . . . . . . ಜಿಲ್ಲೆ . . . . . . . . . . . . ತಾಲ್ಲೂಕು . . . . . . . . . . . . . . ಪಟ್ಟಣ . . . . . . . . . . . ಶಾಲೆಯಲ್ಲಿ ವ್ಯಾಸಂಗ ಮಾಡಿ . . . . . . . . . ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು.

ಸ್ಥಳ :<br>
ದಿನಾಂಕ :

ಮುಖ್ಯೋಪಾಧ್ಯಾಯರ ಸಹಿ<br>
ಮತ್ತು ಸಂಸ್ಥೆಯ ಮೊಹರು

ಮೇಲು ರುಜು<br>
ಕ್ಷೇತ್ರ ಶಿಕ್ಷಣ ಅಧಿಕಾರಿ<br>
ಕಛೇರಿಯ ಮೊಹರು